ಶ್ರೀ ಡಿ. ಮಂಜುನಾಥ್ : ಗಮನ ಸೆಳೆದಿದ್ದಾರೆ.

ಉಪಾಧ್ಯಕ್ಷರು : ಮೊದಲು ಸಂಬಂಧಪಟ್ಟ ಮಂತ್ರಿಗಳ ಗಮನಸೆಳೆದು ನಂತರ ಮಾತನಾಡಬಹುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ.

ಉಪಾಧ್ಯಕ್ಷರು : ಸಗೀರ್ ಅಹಮದರವರೇ, ನೀವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಮೊದಲು ನೀವು ಗಮನ ಸೆಳೆಯಿರಿ, ಮಂತ್ರಿಯವರು ಸ್ಟೇಟಮೆಂಟ್ ಮಾಡಿದಮೇಲೆ ನೀವು ಕೇಳಿ. ತಾವು ಈಗ ಸಂಬಂಧಪಟ್ಟ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ ಎಂದು ಹೇಳಿ.

ಗಮನ ಸೆಳೆಯುವ ಸೂಚನೆ

(ಅ) ದೇವದಾನ ಗ್ರಾಮ ಪಂಚಾಯತಿಯಲ್ಲಿ ಧ್ವಜ ಹಾರಿಸುವ ಬಗ್ಗೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಮುಖಾಂತರ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಒಂದು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಈ ರಾಷ್ಟ್ರದ ಧ್ವಜವನ್ನು ಹಾರಿಸುವುದಕ್ಕೆ ಸರ್ಕಾರದ ವತಿಯಿಂದ ಜಿಲ್ಲಾಪಂಚಾಯತ್ ವತಿಯಿಂದ ಕಡಿವಾಣ ಹಾಕಿರುವಂಥಾದ್ದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯ ವತಿಯಿಂದ ದೇವದಾನ ಗ್ರಾಮ ಪಂಚಾಯಿತಿಯಲ್ಲಿ ಧ್ವಜ ಹಾರಿಸುವ ಬಗ್ಗೆ ಯಾವುದೇ ಕಡಿವಾಣ ಆದೇಶ ಹೊರಡಿಸಿರುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಹೇಳಿರುವಂತಹ ವಿಚಾರ ಸತ್ಯಕ್ಕೆ ದೂರವಾದುದು. ಇದಕ್ಕೆ ಆಧಾರವನ್ನು ಇಟ್ಟುಕೊಂಡು ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂತಹ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಶಾಲಾ ಶೈಕಣಿಕ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸುವುದಕ್ಕಾಗಿ ಸರ್ಕಾರ ದಿನಾಂಕ 12.2.1994ರಲ್ಲಿ ಒಂದು ಆದೇಶವನ್ನು ಹೊರಡಿಸಿದೆ. ಆನಂತರ 13.7.1995ರಂದು ಮತ್ತೊಂದು ಆದೇಶ ಹೊರಡಿಸಿದೆ. ಮುಖ್ಯ ನಿರ್ವಾಹಕ ಅಧಿಕಾರಿಗಳು, ಉಪನಿರ್ದೇಶಕರು ದಿನಾಂಕ 13.12.1995 ಸಾರ್ವಜನಿಕ ಶಿಕ್ಷಣ ಇಲಾಖೆಯವರಿಗೆ ಒಂದು ಪತ್ರ ಬರೆಯುತ್ತಾರೆ. ಯಾವ್ಯಾವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿ

ಅಧ್ಯಕ್ಷರು ಇದ್ದಾರೋ ಅವರನ್ನೇ ಆ ಶಾಲಾ ಶೈಕ್ಷಣಿಕ ಸಮಿತಿಯ ಅಧ್ಯಕ್ಷರನ್ನಾಗಿ ಮಾಡತಕ್ಕದ್ದು ಎಂದು. ಅಲ್ಲಿಯ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಆ ಮಾಹಿತಿ ಸರ್ಕಾರದಿಂದ ಒದಗಿಸಿಕೊಡುವುದಿಲ್ಲ. ಅಲ್ಲಿ ಮಾಜಿ ಮಂಡಲ ಪಂಚಾಯಿತಿಯ ಅಧ್ಯಕ್ಷರು, ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಒಂದು ಪತ್ರ ಬರೆಯುತ್ತಾರೆ. ಇಂತಹವರನ್ನು ಶಾಲಾ ಶೈಕ್ಷಣಿಕ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲು ನಾನು ಸೂಚಿಸುತ್ತೇನೆ ಎಂದು. ಆ ಆದೇಶದ ಮೇರೆಗೆ ದಿನಾಂಕ 25.1.1996ರಂದು 26ನೇ ತಾರೀಖು ಗಣ ರಾಜ್ಯೋತ್ಸವ ಆಚರಣೆ ಮಾಡುವಂತಹ ದಿನ. ನಾನು ಏಕೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ ವಿಶೇಷವಾಗಿ ಅಲ್ಪಸಂಖ್ಯಾತರ ಬಗ್ಗೆ ಅವಕಾಶ ಕಲ್ಪಿಸಿಕೊಟ್ಟಿರುವಂತಾದ್ದು ಕಾನೂನಿನಲ್ಲಿ ಅವಕಾಶ ಇರುವಂಥಾದ್ದರ ಬಗ್ಗೆ ಕಡಿವಾಣ ಹಾಕಿಲ್ಲ ಎಂದು ಸರ್ಕಾರದವರು ಹೇಳುತ್ತಾರೆ. ನಾನು ದಾಖಾಲಾತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಇವರು 25.01.96 ರಂದು ಕಡಿವಾಣವನ್ನು ಹಾಕಿ ಆದೇಶವನ್ನು ಹೊರಡಿಸಿದ್ದಾರೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು ಆ ಧ್ವಜವನ್ನು ಹಾರಿಸಕೂಡದು, ತಾಲ್ಲೂಕುಪಂಚಾಯಿತಿ ಸದಸ್ಯರು ಆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವುದರಿಂದ ಈ ಅವಕಾಶವನ್ನು ಅವರಿಗೆ ಕಲ್ಪಿಸಿ ಕೊಡಲಾಗಿದೆ ಎಂದು ಹೇಳಿ ಆದೇಶವನ್ನು ಹೊರಡಿಸಿರುವಂಥದ್ದು ನನ್ನ ಹತ್ತಿರ ಇದೆ ಅದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ನಾನು ಕೇಳುವಂತಹದ್ದು ಅಧ್ಯಕ್ಷರೆ, ಇಂತಹ ವಿಚಾರಗಳಲ್ಲಿ ಅಲ್ಪಸಂಖ್ಯಾತರ ಬಗ್ಗೆ ಇಟ್ಟಿರುವಂಥ ಸರ್ಕಾರದ ಕಾಳಜಿ, ಅವರ ಅಭಿರುಚಿ ಬಗ್ಗೆ ಅವರ ಬಗ್ಗೆ ಚಿಂತನೆ, ಮಾಡುವಂಥ ಸಂದರ್ಭದಲ್ಲಿ ಇಡೀ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ 49 ಗ್ರಾಮಪಂಚಾಯಿತಿಗಳಿದ್ದು ಪ್ರತ್ಯೇಕವಾಗಿ ಕೇವಲ ಒಂದೇ ಒಂದು ಗ್ರಾಮಪಂಚಾಯಿತಿಗೆ ಈ ಆದೇಶವನ್ನು ಹೊರಡಿಸಬೇಕಾದರೆ ನಿಮ್ಮ ಉದ್ದೇಶ ಏನಿತ್ತು. ಇದರ ಬಗ್ಗೆ ನಾನು ಸರ್ಕಾರದಿಂದ ನಿರ್ದಿಷ್ಟವಾದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಅದರಲ್ಲೂ ವಿಶೇಷವಾಗಿ 49 ಗ್ರಾಮಪಂಚಾಯಿತಿಗಳಲ್ಲಿ ಮತೀಯ ಅಲ್ಪಸಂಖ್ಯಾತ ಕೋಮಿಗೆ ಸೇರಿರುವಂಥ ಒಬ್ಬನೇ ಗ್ರಾಮಪಂಚಾಯಿತಿಯ ಅಧ್ಯಕ್ಷ. ಆತನ ಹೆಸರು ಖಲೀಲ್ ಅಹಮ್ಮದ್ ಎಂದು. ಅವನು ಗಣರಾಜ್ಯೋತ್ಸವವನ್ನು ಆಚರಣೆ ಮಾಡುವಂಥ ದಿನದಂದು ನಮ್ಮ ರಾಷ್ಟ್ರದ ಧ್ವಜಾರೋಹಣ ಮಾಡುವಂಥ ಸಂದರ್ಭದಲ್ಲಿ ಅವನು ಮಾಡಕೂಡದು ಎನ್ನುವ ಒಂದು ಆದೇಶವನ್ನು ಹೊರಡಿಸಿರುವಂಥ ಈ ಸಂದರ್ಭದಲ್ಲಿ ನನಗೂ ಬಹಳ ಮನಸ್ಸಿಗೆ ನೋವಾಗುತ್ತದೆ ಅಧ್ಯಕ್ಷರೆ, ತಾವು ಇದರ ಬಗ್ಗೆ ನ್ಯಾಯವನ್ನು ಒದಗಿಸಿಕೊಡಬೇಕಾಗುತ್ತದೆ. ಕಾರಣ ಏನು ಎಂದು ಹೇಳಿದರೆ, ಈ ವಿಚಾರವನ್ನು ನಾನು ಜಿಲ್ಲಾ ಪಂಚಾಯಿತಿಯ, ನಮ್ಮ ಕರ್ನಾಟಕ ಅಭಿವೃದ್ಧಿ ಸಭೆ ನಡೆಯುವಂಥ ಸಂದರ್ಭದಲ್ಲಿ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲೂ ಸಹ ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದೇನೆ. ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ನಿರ್ಣಯದ ಮೂಲಕವಾಗಿ ಏನು ಹೇಳಿದ್ದಾರೆಂದರೆ, ಈ ವಿಚಾರವನ್ನು ಕೂಲಂಕುಷವಾಗಿ ಜಿಲ್ಲಾಧಿಕಾರಿಗಳಮುಖಾಂತರವಾಗಿ ನಾನು ತನಿಖೆಯನ್ನು ನಡೆಸುತ್ತೇನೆ ಎಂದು ಹೇಳಿದ್ದಾರೆ. ನಾನು ತಮ್ಮ ಮುಖಾಂತರವಾಗಿ ಸರ್ಕಾರಕ್ಕೆ ಕೇಳುವಂತದ್ದು....

ಶ್ರೀ ಬಸವರಾಜ ರಾಯರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಅವರು ಸ್ಪಷ್ಟೀಕರಣವನ್ನು ಕೇಳಲಿ, ಅವರು ಬಜೆಟ್ ಭಾಷಣವನ್ನೋ, ರಾಜ್ಯಪಾಲರ ವಂದನಾರ್ನಿರ್ಣಯಕ್ಕೆ, ಭಾಷಣ ಮಾಡಿದಂತೆ ಮಾಡಿದರೆ ಹೇಗೆ? ಅವರು ಸ್ಪಷ್ಟೀಕರಣವನ್ನು ಕೇಳಲಿ, ತೊಂದರೆ ಏನು ಇದೆ,.....

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ತಾವು ಮಂತ್ರಿಗಳಾಗಿ ತಾವೇ ಈ ರೀತಿ ಹೇಳುವುದು ಸರಿಯೆ?

ಶ್ರೀ ಬಸವರಾಜ ರಾಯರೆಡ್ಡಿ : ಖಿರ್ಗೆಯವರೆ ಇದು ಸರಿಯೇ ನೀವಾದರೂ ಹೇಳಿ?

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ : ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಅವರು ಮಾತನಾಡುತ್ತಿದ್ದಾರೆ. ಮಧ್ಯೆ ಮಧ್ಯೆ ಇವರು ಏಕೆ ಕೇಳಬೇಕು? ತಾವೇನಾದರೂ ಇವರಿಗೆ ಉತ್ತರವನ್ನು ಕೊಡಿ ಎಂದು ಅಪ್ಪಣೆ ಕೊಟ್ಟಿರೋ?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಅಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಅಲ್ಪಸಂಖ್ಯಾತರ ಬಗ್ಗೆ ಮಾತನಾಡತಕ್ಕಂಥವರು, ಅಲ್ಪಸಂಖ್ಯಾತರ ಹಿತವನ್ನು ಕಾಪಾಡುವಂತದ್ದರ ಬಗ್ಗೆ ಚಿಂತನೆ ಮಾಡುವಂಥ ಸರ್ಕಾರ ಇವೊತ್ತು ಹುಬ್ಬಳ್ಳಿಯಲ್ಲಿ ಧ್ವಜಾರೋಹಣ ಮಾಡುವ....

ಉಪಸಭಾಧ್ಯಕ್ಷರು : ಈ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಬೇಕಾಗುತ್ತದೆ, ಏಕೆಂದರೆ ಯಾವುದೇ ದೇಶದ ಯಾವುದೇ ರಾಜಕೀಯ ಪಕ್ಷದ ಮುಖಂಡರು ಇತಹವರೇ ಧ್ವಜಾರೋಹಣ ಮಾಡಬೇಕೆಂದು ವಾದ ಮಾಡಿಲ್ಲ. ಅದು ವಿರೋಧವಾಗಿದ್ದಂಥ ರಾಜಕೀಯ ಪಕ್ಷದವರು ಇರಲಿ, ಆಡಳಿತಪಕ್ಷದಲ್ಲಿದ್ದಂಥ ಸದಸ್ಯರಿರಲಿ, ಪ್ರತಿವರ್ಷ ಅಲ್ಪಸಂಖ್ಯಾತರೆ ಈ ಧ್ವಜಾರೋಹವನ್ನು ಮಾಡಬೇಕು ಎನ್ನುವಂಥ ವಾದ ಮಾಡಿರುವಂಥ ನಿದರ್ಶನಗಳು ಇವೊತ್ತು ದಾಖಲಾತಿಯೊಂದಿಗೆ ನಮ್ಮಬಳಿ ಇವೆ. ಇವೊತ್ತು ಬಿ.ಜೆ.ಪಿ.ಯವರು ಅಲ್ಪಸಂಖ್ಯಾತರಿಗೆ ಸೇರಿದಂತಹವರು ಈ ಧ್ವಜಾರೋಹಣವನ್ನು ಮಾಡಕೂಡದು ಎಂದು ಹೇಳಿಲ್ಲ ಅವರೂ ಅದೇ ಹೇಳಿದರು, ಯಾರೇ ಧ್ವಜಾರೋಹಣವನ್ನು ಮಾಡಲಿ ಅದನ್ನು ಅಲ್ಪಸಂಖ್ಯಾತರ ಮಾಡಲಿ ಎಂದು ಹೇಳಿ ವಾದ ಮಾಡಿದರು. ಆದರೆ ನಾನು ತಮ್ಮಮುಖಾಂತವಾಗಿ ಸರ್ಕಾರದ ಗಮನವನ್ನು ಸೆಳೆಯುವುದೇನೆಂದರೆ, ಇಂತಹ ಅನಾಹುತ ಆಗಿಲ್ಲ ಎಂದು ಹೇಳಿ ಸರ್ಕಾರದವರು ಒಂದು ತಪ್ಪು ಮಾಹಿತಿಯನ್ನು ತಮ್ಮ ಮುಖಾಂತರ ನನಗೆ ಕೊಡುತ್ತಾರಲ್ಲ ಇದು ಸರಿಯೋ ಆ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಒಬ್ಬ ಜಿಲ್ಲಾಪಂಚಾಯಿತಿ ಅಧ್ಯಕ್ಷರು ಮಾಡಿರುವಂಥ ಆದೇಶವನ್ನು ಸರಿಯಲ್ಲ ಎಂದು ಹೇಳಿ ನಾವು ತನಿಖೆಯನ್ನು ನಡೆಸುತ್ತೇವೆ ಎಂದು ಹೇಳುವಂಥ ಸಂದರ್ಭದಲ್ಲಿ ಆ ಅಧಿಕಾರವನ್ನು ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಹೊಂದಿದ್ದಾರೆಯೇ ಎನ್ನುವುದು ನನ್ನ ಮೊದಲನೆ ಪ್ರಶ್ನೆ. ಎರಡನೆಯದಾಗಿ ತಮ್ಮಗಮನಕ್ಕೆ ತರುವಂಥ ವಿಚಾರವೇನೆಂದರೆ, ಮಾನ್ಯ ಗ್ರಾಮೀಣಾಭಿವೃದ್ಧಿಮತ್ತು ಪಂಚಾಯತ್ ರಾಜ್ ಸಚಿವರು. ಮೊನ್ನೆ ಎರಡು ಮೂರು ದಿನಗಳ ಹಿಂದೆ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಹರಿಜನ ಮಹಿಳಾ ಅಧ್ಯಕ್ಷೆ ಇರುವಂಥ ಜಾಗದಲ್ಲಾಗಲೀ, ಗಿರಿಜನ ಮಹಿಳೆ ಅಧ್ಯಕ್ಷಯಾಗಿರುವಂಥ ಜಾಗದಲ್ಲಾಗಲೀ ಹಿಂದುಳಿದಂಥ ವರ್ಗದ ಜನ ಅಧ್ಯಕ್ಷರಾಗಿರುವಂಥ

ಜಾಗದಲ್ಲಾಗಲೀ ಅಲ್ಪಸಂಖ್ಯಾತರಾಗಿರುವಂಥ ಜಾಗದಲ್ಲಾಗಲೀ ಇಂಥ ವಿಚಾರಗಳು ಏನಾದರೂ ಪ್ರಸ್ತಾಪ ಆಗಿದ್ದಲ್ಲಿ ಸರ್ಕಾರ ಕಟ್ಟುನಿಟ್ಟಿ ಕ್ರಮವನ್ನು ಅವರುಗಳ ಮೇಲೆ ಜರುಗಿಸುತ್ತದೆ ಎಂದು ಹೇಳಿದರು. ನಾನು ಅದಕ್ಕೆ ಅಭಿನಂದಿಸುತ್ತೇನೆ. ನನ್ನ ವಾದ ಏನು ಎಂದು ಹೇಳಿದರೆ, ಆಗಿರುವಂಥ ನ್ಯಾಯವಾದಂಥ ವಿಚಾರದ ಬಗ್ಗೆ ಎಲ್ಲಾ ದಾಖಲಾತಿಗಳೊಂದಿಗೆ ಸರ್ಕಾರದ ಗಮವನ್ನು ತಮ್ಮ ಮುಖಾಂತರ ಸೆಳೆಯುವುದಕ್ಕಾಗಿ ನಾನು ಈ ಪ್ರಶ್ನೆಯನ್ನು ಎತ್ತಿದ್ದೇನೆ. ಆದುದರಿಂದ ಇದಕ್ಕೆ ಸಮಂಜಸವಾದಂಥ ಉತ್ತರವನ್ನು ಸರ್ಕಾರದಿಂದ ನಿರೀಕ್ಷೆ ಮಾಡುತ್ತೇನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜಸಚಿವರು ಅವರ ಹೇಳಿಕೆಯಂತೆ ಇದರ ಬಗ್ಗೆ ತನಿಖೆಯನ್ನು ನಡೆಸುವಂತಹದ್ದರಲ್ಲಿ ಅವರು ಆದೇಶವನ್ನು ಹೊರಡಿಸುತ್ತಾರೋ ಎಂದು ಹೇಳಿ ತಮ್ಮ ಮುಖಾಂತರವಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಪ್ರಶ್ನೆ ಈ ಎರಡು ಭಾಗ ಇದೆ. ಒಂದು, ಅವರು ನೇರವಾಗಿ ಎತ್ತಿರುವಂಥ ಪ್ರಶ್ನೆ, ಒಬ್ಬ ಅಲ್ಪಸಂಖ್ಯಾತರಾಗಿರುವುದರಿಂದ ಧ್ವಜ ಹಾರಿಸುವಂಥ ಒಂದು ಮರ್ಯಾದೆಯನ್ನು ಕೊಡದೆ ತಾಲ್ಲೂಕು ಪಂಚಾಯಿತಿ ಸದಸ್ಯ ಇದನ್ನು ಮಾಡಿದ್ದಾನೆ ಎನ್ನುವಂಥ ಮಾತನ್ನು ಅವರು ಪ್ರಸ್ತಾಪ ಮಾಡಿದರು. ಅಲ್ಪಸಂಖ್ಯಾತನಾಗಿರುವಂಥ ಕಾರಣದಿಂದಲೇ ಅವರು ಒಂದು ಪ್ರತ್ಯೇಕ ಮನೋಭಾವನೆಯನ್ನು ತಾಳಿರತಕ್ಕಂಥದ್ದು, ಅಪಮಾನ ಮಾಡಿರತಕ್ಕಂಥದ್ದಾದರೆ ಅದು ಅಕ್ಷಮ್ಯವಾದ ಅಪರಾಧ. ಇಲ್ಲಿ ಪ್ರಶ್ನೆ ಬರುವಂಥದ್ದು ಧ್ವಜವನ್ನು ಯಾರು ಹಾರಿಸಬೇಕು ಎನ್ನುವಂತಹ ನೀತಿ. ಈಗ ನಾವು ಗಣರಾಜ್ಯೋತ್ಸವದಲ್ಲಿ ಅಧ್ಯಕ್ಷರು ಹಾರಿಸುತ್ತಾರೆ, ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ರಧಾನಮಂತ್ರಿಗಳು ಹಾರಿಸುತ್ತಾರೆ. ಇಲ್ಲೂ ಕೂಡ ರಾಜ್ಯದಲ್ಲಿ ಬಂದಾಗ ಇಲ್ಲಿಯ ಮುಖ್ಯಂತ್ರಿಗಳು ಗಣರಾಜ್ಯೋತ್ಸವದ ದಿವಸ ಹಾರಿಸುತ್ತಾರೆ. ನಿಯಮಾವಳಿಗಳು ನಮ್ಮಲ್ಲಿ ಕೂಡ ಇದೆ. 307ನೇ ಸೆಕ್ಷನನಲ್ಲಿ ರಾಷ್ಟ್ರಧ್ವಜವನ್ನು ಬಿಟ್ಟು ಬೇರೆ ಯಾವುದೇ ಧ್ವಜವನ್ನು ಹಾರಿಸಬಾರದು ಎಂಬತಕ್ಕಂಥದ್ದನ್ನು ಕೂಡ ಇದರಲ್ಲಿ ಪ್ರತ್ಯೇಕವಾಗಿ ಹೇಳಿದ್ದಾರೆ. ಇದರ ಜೊತೆಗೆ ತಾವು ಕೇಳಿದರೆ ಜಿಲ್ಲಾಪಂಚಾಯಿತಿಯವರು ಯಾವುದೇ ತೆರವಾಗಿರತಕ್ಕಂಥ ಕಟ್ಟುನಿಟ್ಟಿನ ಆಜ್ಞೆಯನ್ನು ಇವರೇ ಮಾಡಬೇಕು ಅಧ್ಯಕ್ಷರು ಮಾಡಬಾರದು, ತಾಲ್ಲೂಕು ಪಂಚಾಯಿತಿಯ ಸದಸ್ಯರೇ ಮಾಡಬೇಕು ಎನ್ನುವಂಥ ಆಜ್ಞೆಯನ್ನು ಹೊರಡಿಸಿಲ್ಲ ಎಂದು ಹೇಳಿ ನನಗೆ ಮಾಹಿತಿ ಬಂದಿದೆ. ಇದರ ಮೇಲೆ ಸನ್ಮಾನ್ಯ ಸದಸ್ಯರು ಅಂತಹ ಒಂದು ಆಜ್ಞೆ ಕೊಡಲ್ಪಟ್ಟಿದೆ ಎನ್ನುವುದಾಗಿದ್ದರೆ ಅದು ಕಾಯಿದೆ ಸರಿಯಾಗಿ ಇದೆಯೋ ಅಥವಾ ಇಲ್ಲವೋ, ನನಗೆ ಗೊತ್ತಿದ್ದಂತೆ ತಾಲ್ಲೂಕು ಪಂಚಾಯಿತಿ ಸದಸ್ಯನಿಗಿಂತಲೂ ಅಲ್ಲಿಯ ಗ್ರಾಮ ಪಂಚಾಯತಿಯ ಅಧ್ಯಕ್ಷ ಪ್ರಮುಖನಾಗಿರುತ್ತಾನೆ. ಆತ ಹಾರಿಸತಕ್ಕಂಥದ್ದು ಕೂಡ ಬಹಳ ಸೂಕ್ತವಾಗಿರುತ್ತದೆ. ಈ ವಿಚಾರದಲ್ಲಿ ಅನೇಕ ಸಂದರ್ಭಗಳಲ್ಲಿ ಸದನದಲ್ಲಿ ಚರ್ಚೆಗಳಾಗಿವೆ. ತಹಸೀಲ್ದಾರರರು ತಾಲ್ಲೂಕುಗಳಲ್ಲಿ ಹಾರಿಸುತ್ತಿದ್ದರು, ಎಂ.ಎಲ್.ಎಗಳು ಹಾರಿಸುತ್ತಾ ಇರಲಿಲ್ಲ. ಅದರ ಬಗ್ಗೆ ಹಿಂದಿನಸರ್ಕಾರದವರು ಮತ್ತೆ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ, ಈಗ ಶಾಸಕರುಗಳಿಗೆ ಆ ಅಧಿಕಾರ ಬಂದಿದೆ ಎಂದು ನನಗೆ ಗೊತ್ತಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಪ್ರಕಾಶರವರೆ, there is a flag hoisting code. You cannot do that.

ಶ್ರೀ ಎಂ. ಪಿ. ಪ್ರಕಾಶ್ : ನನ್ನ ತಿಳುವಳಿಕೆಯಲ್ಲಿ ಇಲ್ಲದ್ದರಿಂದ ನಾನು ಪ್ರಸ್ತಾಪ ಮಾಡಿದೆ ಅಷ್ಟೆ, ನನಗೆ ಅದರ ಮಾಹಿತಿ ಗೊತ್ತಿಲ್ಲ ಎಂದು ನಾನು ಒಪ್ಪಿಕೊಂಡಿದ್ದೇನಲ್ಲ. ಆದ್ದರಿಂದ ಇವರು ಕಟ್ಟುನಿಟ್ಟಾಗಿ ಇಂತಹ ವಿಚಾರಗಳನ್ನು ತಿಳಿಸತಕ್ಕಂಥದ್ದು ಇಲ್ಲ. ನಮ್ಮ ಸೆಕ್ಷನ್ 307ರ ಕೆಳಗೆ ರಾಷ್ಟ್ರಧ್ವಜವನ್ನು ಬಿಟ್ಟು ಬೇರೆ ಯಾವುದನ್ನು ಹಾರಿಸಬಾರದು. ಅಂತಹದ್ದೆನಾದರೂ ಹಾರಿಸಿದರೆ ಐದು ಸಾವಿರ ರೂಪಾಯಿಗಳ ವರೆಗೆ ದಂಡ, ಮೂರು ತಿಂಗಳವರೆಗೆ ಶಿಕ್ಷೆ ಎಂಬ ಮಾತನ್ನು ಹೇಳಿದ್ದೇವೆ. ಆದರೆ ಇಲ್ಲಿ ಅವರು ಎತ್ತಿರತಕ್ಕಂಥ ಪ್ರಶ್ನೆ ಏನೆಂದರೆ, ಅಧ್ಯಕ್ಷರು ಧ್ವಜವನ್ನು ಹಾರಿಸಬೇಕೇ ಅಥವಾ ತಾಲ್ಲೂಕು ಪಂಚಾಯಿತಿಯ ಸದಸ್ಯರು ಹಾರಿಸಬೇಕೇ ಎನ್ನುವಂಥದ್ದು. ಇದರಲ್ಲಿ ಯಾರು ಹಾರಿಸಬೇಕು ಎನ್ನುವುದಕ್ಕೆ ನಿಯಮಾವಳಿಗಳು ಏನಿವೆಯೋ ಗೊತ್ತಿಲ್ಲ. ಆದರೆ ನನಗೆ ಇರತಕ್ಕಂಥ ಮಾಹಿತಿಯ ಪ್ರಕಾರ ಜಿಲ್ಲಾಪಂಚಾಯಿತಿಯವರಿಗೆ ಯಾವುದೇ ರೀತಿಯಾದ ಆಜ್ಞೆಯಂತೆ ಇಂತಹ ವ್ಯಕ್ತಿಯೇ ಮಾಡಬೇಕೆಂದು ಹೇಳಿ ನಾವು ತಿಳಿಸಿಲ್ಲ. ಆದ್ದರಿಂದ ತಾವು ಈ ವಿಚಾರದಲ್ಲಿ ತೀವ್ರವಾದಂಥ ಭಾವನೆಗಳಿಗೆ ಒಳಗಾಗಬೇಕಾದಂಥ ಅಗತ್ಯ ಇಲ್ಲ. ತಾವು ಹೇಳಿದರೆ ಈ ದಿವಸವೇ ನಾನು ಮುಖ್ಯಕಾರ್ಯನಿರ್ವಾಹಕರ ಹತ್ತಿರ ಕಡತವನ್ನು ತರಿಸಿಕೊಂಡು ಇದರ ಬಗ್ಗೆ ತನಿಖೆ ಮಾಡಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಕೇಳಿದ್ದೇನೆಂದರೆ, 49 ಪಂಚಾಯಿತಿಯ ಅಧ್ಯಕ್ಷರುಗಳ ಅವರವರ ಕ್ಷೇತ್ರದಲ್ಲಿ ಅವರು ಧ್ವಜಾರೋಹಣ ಮಾಡಬಹುದು. ಇದೊಂದನ್ನು ಹೊರತುಪಡಿಸಿ, ಅದಕ್ಕೆ ಮಾತ್ರ ಅವರು ಒಂದು ಆರ್ಡರ್ ಕಳುಹಿಸಿ, ಯಾರೂ ಮಾಡಬಾರದು, ಇಂತಹವರೇ ಅಲ್ಲಿ ಧ್ವಜಾರೋಹಣವನ್ನು ಮಾಡಬೇಕು ಎಂದು ಹೇಳಿದ್ದಾರ ಎನ್ನತಕ್ಕಂಥ ಮಾತನ್ನು ಅವರು ಸ್ಪಷ್ಟಪಡಿಸಿದ್ದಾರೆ. ಮತ್ತೆ ಅದರ ಆದೇಶವನ್ನು ನಿಮಗೆ ಬೇಕಾದರೆ ನಾನು ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ, ಇಷ್ಟು ಬರವಣಿಗೆಯಲ್ಲಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಿರಿ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ನನಗೆ ಬಂದಿರತಕ್ಕಂಥ ಮಾಹಿತಿಯ ಪ್ರಕಾರ ಜಿಲ್ಲಾಪಂಚಾಯಿತಿಯವರು ಯಾವುದೇ ನಿರ್ದಿಷ್ಟವಾದ ಆಜ್ಞೆಯನ್ನು ಕಳುಹಿಸಿ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಆಕಸ್ಮಾತ್ ಹಾಗೆ ಏನಾದರೂ ಆದೇಶ ಕಳುಹಿಸಿರತಕ್ಕಂಥದ್ದನ್ನು ಮಾನ್ಯ ಸದಸ್ಯರು ನನಗೆ ಕಳುಹಿಸಿಕೊಟ್ಟರೆ ಈ ದಿವಸವೇ ನಾನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿ ಕ್ರಮ ತೆಗೆದುಕೊಳ್ಳುವುದಕ್ಕೆ ಮತ್ತು ಈ ವಿಚಾರದಲ್ಲಿ ಅವರ ಪ್ರಕಾರ ಸ್ಪಷ್ಟೀಕರಣವನ್ನು ಕೂಡ ನಾನು ಕೇಳುತ್ತೇನೆ. ಅಲ್ಲಿಂದ ವರದಿ ಬಂದನಂತರ ಸೂಕ್ತಕ್ರಮವನ್ನು ಅವರಮೇಲೆ ಕೈಗೊಳ್ಳುತ್ತೇನೆ.

ಉಪಾಧ್ಯಕ್ಷರು : ತಾವು ಕಳುಹಿಸಿ ಕೊಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಕಳುಹಿಸಿಕೊಡುತ್ತೇನೆ. ಆದರೆ ಮಾನ್ಯ ಮಂತ್ರಿಯವರಿಂದ ಈ ಹೇಳಿಕೆಯ ಬಗ್ಗೆ ನನಗೆ ಇನ್ನೊಂದು ಮಾಹಿತಿಯನ್ನು ಕೊಡಬೇಕಾಗುತ್ತದೆ.

ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಸಂಪೂರ್ಣವಾದಂತಹ ಅಧಿಕಾರವನ್ನು ನೀಡಲಾಗಿದೆ ಎಂದು ಹೇಳಿ ಸರ್ಕಾರದ ವತಿಯಿಂದ ಆದೇಶವನ್ನು ಹೊರಡಿಸಲಾಗಿದೆ. ಆದರೆ ಯಾವ ನಿರ್ವಹಣೆಯನ್ನು ಮಾಡುವಂತಹ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರು ಹೊಂದಿರುತ್ತಾರೆ. ಅವರ ಮೇಲೆ ತನಿಖೆಯಾಗಿ ಮುಂದೆ ಕಾರ್ಯ ನಿರ್ವಾಹಕ ಅಧಿಕಾರಿಗಳು ತನಿಖೆ ನಡೆಸುವಂತಹ ಅರ್ಹತೆ ಇದೆಯೋ ಎಂದು ನನ್ನ ಪ್ರಶ್ನೆಯಾಗಿದೆ. ನಾನು ಸಂಬಂಧಪಟ್ಟ ಕಡತಗಳನ್ನು ತಂದಿದ್ದೇನೆ, ಅದನ್ನು ತಮಗೆ ಕಳುಹಿಸಕೊಡುತ್ತೇನೆ, ತಾವು ಅಲ್ಪ ಸಂಖ್ಯಾತರ ಬಗ್ಗೆ ಇಟ್ಟಿರುವಂತಹ ವಿಶ್ವಾಸ, ಪ್ರೀತಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅವರು ಇದನ್ನು ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಕೆ ನಡೆಸುತ್ತೇನೆಂದರೆ ಸಾಕು, ನಂತರ ಈ ದಾಖಲೆಗಳನ್ನು ಒದಗಿಸತಕ್ಕಂಥದ್ದು, ಸಭೆಯ ನಡವಳಿಕೆಗಳನ್ನು ಒದಗಿಸತಕ್ಕಂಥದ್ದು. ಇದರ ಮಧ್ಯೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಶಾಲಾ ಶೈಕ್ಷಣಿಕ ಸಮಿತಿಯನ್ನು ರಚಿಸಿರುವಂತಹ ಸಂದರ್ಭದಲ್ಲಿ ಈ ಶಾಲೆಯ ಅಧ್ಯಕ್ಷರಿಗೆ ನಮಮ ರಾಷ್ಟ್ರಧ್ವಜಾರೋಹಣ ಮಾಡುವಂತಹ ಅಧಿಕಾರವನ್ನು ಹೊಂದಿರತಕ್ಕಂಥದ್ದ ಈ ಸಂಪ್ರದಾಯ ಬಹಳ ಹಿಂದಿನಿಂದಲೂ ನಮ್ಮದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಂದಿನಿಂದಲೂ ಈ ಧ್ವಜಾರೋಹಣಾ ಕಾರ್ಯಕ್ರಮವನ್ನು ಇಲ್ಲಿಯವರೆಗೂ ಮಾಡಿಕೊಂಡು ಬಂದಿದ್ದೇವೆ. ಆದರೆ 49 ಪಂಚಾಯತಗಳಲ್ಲಿ ಕೇವಲ ಇದು ಒಂದು ಪಂಚಾಯತಗೆ ಮಾತ್ರ 25ನೇ ತಾರೀಖು ಈ ಆದೇಶವನ್ನು ಹೊರಡಿಸುವಂತಹ ಅವಶ್ಯಕತೆ ಇತ್ತೆ? ಇದು ಒಂದೇ ನನ್ನ ಪ್ರಶ್ನೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ನಾನು ತಮಗೆ ಒಂದು ಭರವಸೆಯನ್ನು ಕೊಡುತ್ತೇನೆ. ಒಬ್ಬ ಮಾನ್ಯ ನಿರ್ವಾಹಕ ಅಧಿಕಾರಿ ನಿಷ್ಪಕ್ಷಪಾತವಾಗಿ ತನಿಖೆ ಮಾಡಬಹುದು. ಇಲ್ಲಿ ತನಿಖೆ ಮಾಡುವುದು ದೊಡ್ಡ ವಿಷಯವಲ್ಲ. ವಸ್ತುಸ್ಥಿತಿ ಏನು ಇದೆ. ಇಲ್ಲಿ ಕೊಟ್ಟಿರುವಂತಹ ಆಜ್ಞೆ ಅದು ನಿಜವಾಗಿ ಯಾರ ಆಜ್ಞೆಯಾಗಿದೆಯೊ,ಮುಖ್ಯವಾಗಿ ಕಾರ್ಯನಿರ್ವಾಹಕ ಅಧಿಕಾರಿ ಮಾಡಿದ್ದಾರೋ ಅಥವಾ ಅಧ್ಯಕ್ಷರು ಮಾಡಿದ್ದಾರೋ ಅಥವಾ ಅಧ್ಯಕ್ಷರ ರುಜುವನ್ನು ಬೇರೊಬ್ಬರು ಮಾಡಿದ್ದಾರೆ ಎಂದು ಇಷ್ಟು ವಿಷಯವನ್ನು ನನಗೆ ತಿಳಿಸಿದ ತಕ್ಷಣ ನಾನೇ ಸೂಕ್ತವಾದ ಕ್ರಮವನ್ನು ಕೈಗೊಳ್ಳಬಹುದು.

ಉಪ ಸಭಾಧ್ಯಕ್ಷರು : ಮಾನ್ಯ ಹೆಚ್. ಶಿವಪ್ಪ ಹಾಗೂ ಮಾನ್ಯ ಯು.ಬಿ. ಬಣಕಾರ್‌ರವರೆ ತಮ್ಮ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಸಮಯಾವಕಾಶವನ್ನು ಕೇಳಿದ್ದಾರೆ. ಅದಕ್ಕಾಗಿ ತಮ್ಮ ವಿಷಯವನ್ನು ನಂತರ ತೆಗೆದುಕೊಳ್ಳುತ್ತೇವೆ.

ಆ) ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಮುಖಂಡರಾದ ಶ್ರೀ ಮಹೇಶ್ ಹೆಗಡೆ ಮತ್ತು ಅವರ ಸಂಗಡಿಗರು ದಲಿತ ಯುವ ಕಾರ್ಮಿಕ ಶ್ರೀರಾಮಕೃಷ್ಣ ಅವರ ಮೇಲೆ ನಡೆಸಿದ ಹಲ್ಲೆ.

ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ದಿ: 30-1-95 ರಂದು ಹಾಡು ಹಗಲೇ ಕಾಂಗ್ರೆಸ್ ಮುಖಂಡ ಶ್ರೀಮಹೇಶ್ ಹೆಗಡೆ